ಮಕ್ಕಳದಿನ ವಿಶೇಷ

# ನನ್ನ ಬರಹ ಎಲ್ಲರೂ ಓದಬಹುದಾದ ಸಾಹಿತ್ಯ

## ಕೆ. ಶಿವಲಿಂಗಪ್ಪ ಹಂದಿಹಾಳು ಸಂದರ್ಶನ

**1** ಮಕ್ಕಳ ಸಾಹಿತ್ಯವನ್ನು ನಿಮ್ಮ ಬರವಣಿಗೆಯ ಪ್ರಮುಖ ಪ್ರಕಾರವನ್ನಾಗಿ ಆರಿಸಿಕೊಂಡಿರುವುದು ಏಕೆ?

**2** ಮಕ್ಕಳಿಗಾಗಿ ಬರೆಯುತ್ತಿರುವುದಕ್ಕೆ ನಿರ್ದಿಷ್ಟ ಕಾರಣಗಳೇನಾದರೂ ಇವೆಯೆ?

**3** ಕಥೆ–ಕವಿತೆ ಹಚ್ಚಿಕೊಂಡ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ ಅನ್ನಿಸಿದೆಯೆ? ಹೌದು ಎನ್ನುವುದಾದರೆ, ನಿರುತ್ಸಾಹದ ಸನ್ನಿವೇಶದಲ್ಲೂ ಬರೆಯುವ ಉತ್ಸಾಹವನ್ನು ನಿಮ್ಮಲ್ಲಿ ಉಳಿಸಿರುವ ಅಂಶ ಯಾವುದು?

**4** ಮಕ್ಕಳಿಗಾಗಿ ಬರೆಯುವವರು ಮುಖ್ಯವಾಗಿ ಯಾವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು? ಹಾಗೆ ನಿಮ್ಮ ಮನಸ್ಸಿನಲ್ಲಿರುವುದು ಏನು?

**5** ಮಕ್ಕಳಿಗೆ ಬೇಕಾದುದು ಏನು? ಬರಹಗಾರ ಅದನ್ನು ಅರಿಯುವ ಕ್ರಮ ಹೇಗೆ?

**6** ಮಕ್ಕಳಿಗಾಗಿ ಬರೆಯುವುದರ ಬದಲು ದೊಡ್ಡವರಿಗಾಗಿ ಬರೆದಿದ್ದರೆ ಚೆನ್ನಾಗಿತ್ತು ಎಂದು ಯಾವಾಗಲಾದರೂ ಅನ್ನಿಸಿದೆಯೆ?

**7** ನಿಮ್ಮ ಬರವಣಿಗೆಗೆ ಸಂಬಂಧಿಸಿದಂತೆ ಈವರೆಗೆ ದೊರೆತಿರುವ ಅತ್ಯುತ್ತಮ ಪ್ರಶಂಸೆ ಯಾವುದು?

**1**

ಮಕ್ಕಳ ಸಾಹಿತ್ಯವೇ ಪ್ರಮುಖ ಧಾರೆಯಾಗಿರುವುದಕ್ಕೆ ಒಂದೇ ಬಗೆಯ ಕಾರಣ ಇರುವುದಿಲ್ಲ, ಒಬ್ಬೊಬ್ಬರದು ಒಂದೊಂದು ಹಿನ್ನೆಲೆ ಇರುತ್ತದೆ. ಜಗತ್ತಿನಾದ್ಯಂತ ಮಕ್ಕಳ ಸಾಹಿತ್ಯವನ್ನು ಒಂದು 'ಕೆಟಗರಿ' ಎಂದೇ ತಮ್ಮನ್ನು ತಾವು ಪೂರ್ತಿ ಅಭಿವ್ಯಕ್ತಿಗೆ ತೊಡಗಿಸಿಕೊಂಡದ್ದು ಇದೆ. 'ವಿನ್ನಿ ದಿ ಪೂಹ' ಬರೆದ ಎ.ಎ. ಮಿಲ್ನೆ, 'ಪೀಟರ್ ಪ್ಯಾನ್' ಎಂಬ ಅಳಿಯದ ಬಾಲ್ಯದ ಹುಡುಗನ ಕಥೆಯನ್ನು ಸೃಷ್ಟಿಸಿದ ಜೆ.ಎಂ. ಬೆರ್ರಿ, ಆಲಿಸ್‌ಳ ಅದ್ಭುತ ಲೋಕ ತೆರೆದಿಟ್ಟ ಲೂಯಿ ಕೆರೊಲ್, ಫಿಲಿಪ್ ಪುಲ್‌ಮನ್ ಹೀಗೆ ಹಲವರು ತಮ್ಮೆಲ್ಲ ಬರವಣಿಗೆಯನ್ನು ಮಕ್ಕಳಿಗೋಸ್ಕರ ಮೀಸಲಿರಿಸಿಕೊಂಡಿರುವುದಕ್ಕೆ ಅವರ ಬದುಕೇ ಪ್ರಬಲ ಕಾರಣವಾಗಿದೆ. ಹಾಗೆ ನಾನು ಕಳೆದ ಗ್ರಾಮೀಣ ಜಗತ್ತು, ಆ ಬಾಲ್ಯದ ದಿನಗಳು ನನ್ನ ಮರೆವನ್ನು ಮೀರಿ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದಂತಿವೆ. ಇದಕ್ಕೆ ಪೂರಕ ಎನ್ನುವಂತೆ ನಾನು ಶಿಕ್ಷಕನೇ ಆಗಿರುವುದರಿಂದ ನನ್ನ ಮುಂದಿನ ಹಳ್ಳಿಗಾಡಿನ ಮಕ್ಕಳ ಬದುಕು ಮತ್ತೆ ಮತ್ತೆ ನನ್ನನ್ನು ಹಿಂದಕ್ಕೆ ಒಯ್ಯುತ್ತದೆ. ಅಲ್ಲಿನ ಆ ತೀರದ ಅನುಭವಗಳು ನಾನು ಮಕ್ಕಳಿಗಾಗಿ ಬರಹಕ್ಕೆ ತೊಡಗಲು ಪ್ರಮುಖ ಕಾರಣವಾಗಿವೆ. ನನ್ನ ಜೀವನದಲ್ಲಿ ಮರೆಯಲಾಗದ ಅತ್ಯಂತ ಸಂತಸ ಮತ್ತು ಭಾರೀ ದುಃಖದ ಸಂಗತಿಗಳು ಬಾಲ್ಯದಲ್ಲೇ ಘಟಿಸಿವೆ. ಅವು ನನಗರಿವಿಲ್ಲದೆಯೇ ತೆರೆದುಕೊಳ್ಳುತ್ತಿರುತ್ತವೆ. ನಾನು ಬೇರೆ ಓದು–